**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ವರ್ಗ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಗುಂಡ್ಲುಪೇಟೆ**

**ಸಿ ಸಿ ನಂ. 753/2023**

ಫಿರ್ಯಾದುದಾರರು ಸರ್ಕಾರದ ಪರವಾಗಿ ಗುಂಡ್ಲುಪೇಟೆ ಪೋ. ಠಾಣೆ

ವಿರುದ್ಧ

ಆರೋಪಿಗಳು

1. ಪ್ರಸಾದ್ ಬಿನ್ ಸುಬ್ಬಣ್ಣ, 33 ವರ್ಷ,
2. ಸುಗಂಧ ಕೋಂ ಪ್ರಸಾದ್, 30 ವರ್ಷ,

1 ಮತ್ತು 2ನೇ ಆರೋಪಿಗಳ ವಾಸಃ ನಂ. 32 ವರ್ಷ,
ಕೇರಾಫ್ ನಂಜಯ್ಯಕೃಷ್ಣಾನಂದ ನಗರ,
3ನೇ ಕ್ರಾಸ್, ಮಹಾಲಕ್ಷ್ಮೀ ಲೇ ಔಟ್, ಬೆಂಗಳೂರು.

**ಸ್ವಂತ ಸ್ಥಳಃ** ಕಂದೇಗಾಲದ ಹೊಸೂರು ಗ್ರಾಮ,
ಗುಂಡ್ಲುಪೇಟೆ ತಾಲ್ಲೂಕು.

3. ಮುತ್ತಮ್ಮ ಕೋಂ ಸುಬ್ಬಣ್ಣ, 58 ವರ್ಷ,
4. ಸುಬ್ಬಣ್ಣ ಬಿನ್ ಲೇಟ್ ಲಿಂಗಪ್ಪ, 75 ವರ್ಷ,

ಆರೋಪಿ 3 ಮತ್ತು 4 ರವರ ವಾಸಃ ಕಂದೇಗಾಲದ
ಹೊಸೂರು ಗ್ರಾಮ, ಗುಂಡ್ಲುಪೇಟೆ ತಾಲ್ಲೂಕು.

## ದೋಷಾರೋಪಣೆ

ಶ್ರೀಮತಿ ನೂರುನ್ನೀಸ. ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಗುಂಡ್ಲುಪೇಟೆ ಆದ ನಾನು ಆರೋಪಿಗಳಾದ ನಿಮ್ಮನ್ನು ಈ ಕೆಳಕಂಡ ಆಪಾದನೆಗಳಿಗೆ ಗುರಿಪಡಿಸುತ್ತೇನೆ.

ದಿಃ 14.11.2023 ರಂದು ಬೆಳಗ್ಗೆ 10.00 ಗಂಟೆ ಸಮಯದಲ್ಲಿ ಗುಂಡ್ಲುಪೇಟೆ ಪೊಲೀಸ್ ಠಾಣಾ ಸರಹದ್ದು ಕಂದೇಗಾಲದ ಹೊಸೂರು ಗ್ರಾಮದ ಲಿಂಗಾಯಿತರ ಬೀದಿಯಲ್ಲಿರುವ ಚಾಸಾ-1 ಸೂರಿ ರವರ ಮನೆಯ ಮುಂದೆ ಚಾಸಾ-2 ದೇವಮ್ಮಣ್ಣಿ @ ದೇವಮ್ಮ ರವರು ಬಟ್ಟೆಯನ್ನು ಒಗೆಯುತ್ತಿದ್ದಾಗ ಆರೋಪಿಗಳಾದ ನೀವು ಹಳೇಯ ಅಲ್ಲಿಗೆ ಬಂದಿದ್ದು, ನಿಮ್ಮಗಳ ಪೈಕಿ 3ನೇ ಆರೋಪಿಯಾದ ನೀವು ಚಾಸಾ-2 ದೇವಮ್ಮಣ್ಣಿ @ ದೇವಮ್ಮ ರವರನ್ನು ಸೂಳೇ ಮುಂಡೆ, ರಂಡೆ ಎಂದು ಬೈದಿದ್ದು, 1ನೇ ಆರೋಪಿಯಾದ ನೀವು ಚಾಸಾ-2 ದೇವಮ್ಮಣ್ಣಿ @ ದೇವಮ್ಮ ರವರಿಗೆ ಬೀದಿಯಲ್ಲಿ ಬಟ್ಟೆ ಒಗೆಯುತ್ತೀಯಾ ಕತ್ತೆ ಮುಂಡೆ ಎಂದು ಅವಾಚ್ಯ ಶಬ್ದಗಳಿಂದ ಬೈದು ನಿಂದಿಸಿರುತ್ತೀರೆಂದು ಹಾಗೂ 4ನೇ ಆರೋಪಿಯಾದ ನೀವು ಚಾಸಾ-2 ದೇವಮ್ಮಣ್ಣಿ @ ದೇವಮ್ಮ ಮತ್ತು ಚಾಸಾ-3 ಮಂಗಳಮ್ಮ ರವರಿಗೆ ಈ ಮುಂಡೆಯರೇ ಮನೆಯನ್ನು ಮುರಿಯುತ್ತಿರುವುದು ಈ ಸೂಳೆ ಮುಂಡೆಯರನ್ನು ಊರಿನಿಂದ ಹೊರಗೆ ಹಾಕಬೇಕು ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತೀರೆಂದು ಆಗ 2ನೇ ಆರೋಪಿಯಾದ ನೀವು ಚಾಸಾ-2

ದೇವಮ್ಮಣ್ಣಿ @ ದೇವಮ್ಮ ರವರನ್ನು ಹಲ್ಕಾ ಮುಂಡೆ ಎಂದು ಬೈದಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **504 ಸಹವಾಚಕ 34** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಎರಡನೇಯದಾಗಿ, ಮೇಲ್ಕಂಡ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಚಾಸಾ–2 ದೇವಮ್ಮಣ್ಣಿ @ ದೇವಮ್ಮ ರವರ ಜೊತೆ ಜಗಳ ತೆಗದು ಗಲಾಟೆ ಮಾಡಿ ನಿಮ್ಮಗಳ ಪೈಕಿ 1ನೇ ಆರೋಪಿಯಾದ ನೀವು ಚಾಕುವಿನಿಂದ ಚಾಸಾ–2 ದೇವಮ್ಮಣ್ಣಿ @ ದೇವಮ್ಮ ರವರ ಎಡತೋಳಿಗೆ ಗೀಚಿ ರಕ್ತಗಾಯಪಡಿಸಿದಾಗ ಚಾಸಾ–2 ದೇವಮ್ಮಣ್ಣಿ @ ದೇವಮ್ಮ ರವರು ಕಿರುಚಿಕೊಂಡಾಗ ಅಲ್ಲೆ ಇದ್ದ ಚಾಸಾ–3 ಮಂಗಳಮ್ಮ ರವರು ಬಿಡಿಸಲು ಬಂದಾಗ 1ನೇ ಆರೋಪಿಯಾದ ನೀವು ಚಾಸಾ–3 ಮಂಗಳಮ್ಮ ರವರಿಗೂ ಸಹ ಅದೇ ಚಾಕುವಿನಿಂದ ಅವರ ಬಲ ತೋಳಿಗೆ ಗೀಚಿ ರಕ್ತಗಾಯಪಡಿಸಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರೆಂದು ಆ ಮೂಲಕ ಭಾ ದಂ ಸಂ ಕಲಂ **324 ಸಹವಾಚಕ 34** ರಡಿಯಲ್ಲಿ ಅಪರಾಧವನ್ನು ಎಸಗಿರುವುದಾಗಿ ಆರೋಪಿಸಲಾಗಿದೆ.

ಮೇಲ್ಕಂಡ ಅಪಾದನೆಗಳನ್ನು ನೀವು ಈ ನ್ಯಾಯಾಲಯದ ಸಂಜ್ಞಾದೊಳಗೆ ಎಸಗಿರುವುದಾಗಿ ಈ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ
ಗುಂಡ್ಲುಪೇಟೆ